## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ. 70/2025

ಚಾಸಾ-14 ಪ್ರಾಸಾ-12

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 11-06-2026

| | | |
|---|---|---|
| ಹೆಸರು | : | ಕರೀಂ |
| ತಂದೆಯ ಹೆಸರು | : | ಅಲ್ಲಾಬಕ್ಷ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸಸ್ಥಳ | : | ಮೋರಟಗಿ ತಾ. ಸಿಂದಗಿ |

-: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

ಚಾಸಾ 15 ಪರಿಚಯ ಇರುತ್ತದೆ. ಸದರಿಯವರು ಮೃತರಾಗಿರುತ್ತಾರೆ.

ಬಗಳೂರು ಗ್ರಾಮದ ಬಾಗ್ಯವಂತಿ ಪೆಟ್ರೋಲ ಪಂಪನಲ್ಲಿ ನಾನು ಸುಮಾರು 7-8 ವರ್ಷಗಳ ಕಾಲ ಕೆಲಸ ಮಾಡಿರುತ್ತೇನೆ.

ಕಾರ್ಖಾನೆಗೆ ಸಂಬಂಧಿಸಿದ ವಾಹನಗಳು ಹಾಗೂ ಕಾರ್ಖಾನೆ ಸಿಬ್ಬಂದಿ ಕ್ಯಾನಗಳ ಮುಖಾಂತರ ಕಂಪನಿಗೆ ಇಂಡೆಂಟ ನೀಡಿ ಡೀಸೆಲ ತೆಗೆದುಕೊಂಡು ಹೋಗುತ್ತಿದ್ದರು. ಇಷ್ಟು ಹೊರತುಪಡಿಸಿ ನನಗೆ ಬೇರೆ ಏನು ಗೊತ್ತಿಲ್ಲ.

(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸ.ಸ.ಅ. ರವರಿಂದ</u>

ರೇಣುಕಾ ಶುಗರ್ಸ ರವರು ಡೀಸೆಲ್ ಕುರಿತು ಒಪ್ಪಂದ ಮಾಡಿಕೊಂಡಿದ್ದರು ಎಂದರೆ ಸರಿ. ಆರೋಪಿತರು ತುರ್ತಾಗಿ ಡೀಸಲ ಬೇಕಾಗಿದೆ ಎಂದು ನಮ್ಮ ಪೆಟ್ರೋಲ ಏಜೆನ್ಸಿಗೆ ಬಂದು ಕಂಪನಿ ಇಂಡೆಂಟ ಸ್ಲಿಪಗಳು ನೀಡಿ ಡೀಸೆಲ ಒಯ್ಯುತ್ತಿದ್ದರು ಎಂದರೆ ಸರಿ. ದಿಃ 03-02-2013 ರಿಂದ 13-02-2014 ರವರೆಗೆ ಒಟ್ಟು 5 ಇಂಡೆಂಟ ಸ್ಲಿಪ ನೀಡಿ 490 ಲೀಟರ ಡೀಸೆಲ ತೆಗೆದುಕೊಂಡು ಹೋಗಿರುತಾರೆ ಎಂದರೆ ಸರಿ. ಆರೋಪಿತರು ಒಟ್ಟು 20 ಇಂಡೆಂಟ ಸ್ಲಿಪಗಳು ಕಳುವುಮಾಡಿ ನಮ್ಮ ಪೆಟ್ರೋಲ ಏಜೆನ್ಸಿಯಿಂದ 490 ಲೀಟರ ಡೀಸೆಲ ತಮ್ಮ ಸ್ವಂತಕ್ಕೆ ಬಳಸಿಕೊಂಡು ಕಂಪನಿಗೆ ಮೋಸ ಮಾಡಿರುವ ಕುರಿತು ನನಗೆ ಮಾಹಿತಿ ಇದೆ ಎಂದರೆ ಸರಿ. ಅದೇ ರೀತಿ ಅಫಜಲಪುರದ ಮಹಾಂತೇಶ್ವರ ಏಜೆನ್ಸಿ ಮತ್ತು ಮಲ್ಲಿಕಾರ್ಜುನ ಪೆಟ್ರೋಲ ಪಂಪಗಳಲ್ಲಿ ಇದೇ ರೀತಿ ಇಂಡೆಂಟಗಳನ್ನು ನೀಡಿ ಡೀಸೆಲ ಪಡೆದಿರುತ್ತಾರೆ ಎಂದು ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಆರೋಪಿ 1 ರಿಂದ 5 ರವರು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಈ ರೀತಿ ರೇಣುಕಾ ಶುಗರ್ಸ ಫಾಕ್ಟರಿಗೆ ಮೋಸ ಮಾಡಿರುತ್ತಾರೆಂದು ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **DK** ವಕೀಲರಿಂದ :-</u>

ನಾನು ಭಾಗ್ಯವಂತ ಪೆಟ್ರೋಲ ಪಂಪನಲ್ಲಿ ಕೆಲಸ ಮಾಡುತ್ತಿದ್ದೆ ಎಂದು ಯಾವುದೇ ಗುರುತಿನ ಚೀಟಿ ನೀಡಿಲ್ಲ. ನಮ್ಮ ಪೆಟ್ರೋಲ ಬಂಕನಲ್ಲಿ ನೀಡಿದ ಇಂಡೆಂಟ ಸ್ಲಿಪ ನಂಬರ ನನಗೆ ಗೊತ್ತಿಲ್ಲ. ಯಾವ ಆರೋಪಿತರು ಎಷ್ಟು ಡೀಸಲ ಒಯ್ದುರು ಎಂದು ನನಗೆ ಮಾಹಿತಿ ಇಲ್ಲ. ಮಹಾಂತೇಶ್ವರ ಮತ್ತು ಮಲ್ಲಿಕಾರ್ಜುನ ಪೆಟ್ರೋಲ ಬಂಕನಿಂದ ಪಡೆದ ಡೀಸಲ ಕುರಿತು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಡೀಸೆಲ ಯಾರು ತೆಗೆದುಕೊಂಡು ಹೋಗಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ಈ ಪ್ರಕರಣ ಕುರಿತು ನನಗೆ ಮಾಹಿತಿ ಇರದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ